**O.S.No**.134/2016

**Pw**.1

**<u>ಸಾಕ್ಷಿಯನ್ನು ಕರೆಯಿಸಿ ದಿನಾಂಕಃ 18-08-20285 ರಂದು ಪ್ರಮಾಣಿಕರಿಸಲಾಯಿತು.</u>**

**<u>ಪಾಟೀಸವಾಲು: ಪ್ರತಿವಾದಿ ಪರ ವಕೀಲರಿಂದ ಶ್ರೀಜಿಕೆ ವಕೀಲರಿಂದ</u>**

ನನ್ನ ತಾತನ ಹೆಸರು ವೆಂಕಟರಮಣಪ್ಪ, ನನ್ನ ತಾತನಿಗೆ ಮುಡಲಪ್ಪ ಎಂಬ ಸಹೋದರ ಇದ್ದನು. ಮೂಡ್ಲಪ್ಪನ ಮಗನೇ ಗಿರಿಯಪ್ಪ ಎಂದರೆ ಸರಿ. ನಾಗಮ್ಮ ಮತ್ತು ಅವರ ಮಕ್ಕಳು ಗಿರಿಯಪ್ಪನವರ ಹೆಂಡಂತಿ ಮತ್ತು ಮಕ್ಕಳು ಎಂದರೆ ಸರಿ. ನಮ್ಮ ತಾತನಿಗೆ ಮೂರು ಜನ ಮಕ್ಕಳು ಕರೆತಿಮ್ಮಪ್ಪ, ಗೋವಿಂದಪ್ಪ, ಚಿಕ್ಕತಿಮ್ಮಯ್ಯ. ಎರಡನೇ ಪ್ರತಿವಾದಿ ಚಿಕ್ಕತಿಮ್ಮಪ್ಪ ನವರ ಮಗಳು ಎಂದರೆ ಸರಿ. ಲಲಿತಮ್ಮ ನವರು ನಮ್ಮ ಜಮೀನಿನ ಮೇಲೆ ಹಕ್ಕನ್ನು ಕ್ಲಮ್ ಮಾಡಿದ್ದರಿಂದ ಅವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿದ್ದೇನೆ. ಚಿಕ್ಕತಿಮ್ಮಪ್ಪ ನವರ ಹೆಂಡಂತಿ ಸಕ್ರಮ್ಮ ಮೊದಲನೇ ಪ್ರತಿವಾದಿಗೆ ದಾವಾ ಆಸ್ತಿಯಲ್ಲಿ 2 ಎಕರೆ 2 ಗುಂಟೆ ಯನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ, ಕ್ರಯದಂತೆ ಮೊದಲನೇ ಪ್ರತಿವಾದಿಗೆ ಪೋಡಿ ಆಗಿದೆ ಎಂಬ ಪ್ರಶ್ನೆಗೆ ಸಾಕ್ಷಿಯೂ ನಮಗೆ ತಿಳಿಯದಂತೆ ಮಾಡಲಾಗಿದೆ ಎಂದು ಉತ್ತರಿಸುತ್ತಾರೆ. ದಾವಾ ಆಸ್ತಿಯಲ್ಲಿ ನನಗೆ ಮತ್ತು ನನ್ನ ಸಹೋದರರಿಗೆ ಕೇವಲ 1 ಎಕರೆ 24 ಗುಂಟೆ ಆಸ್ತಿ ಇದೆ ಎಂದರೆ ನನಗೆ ಗೊತ್ತಿಲ್ಲದಂತೆ ದಾಖಲೆ ಮತ್ತು ಖಾತೆ ಮಾಡಿರುತ್ತಾರೆ ಎಂದು ಉತ್ತರಿಸುತ್ತಾರೆ. ದಾವಾ ಸರ್ವೇ ನಂ. ನಲ್ಲಿ 4 ಎಕರೆ 35 ಗುಂಟೆ ಅಸ್ತಿತ್ವ ದಲ್ಲಿ ಇರುವುದಿಲ್ಲ ಕೇವಲ 1 ಎಕರೆ 24 ಗುಂಟೆ ಮಾತ್ರ ಇರುತ್ತದೆ ಎಂದರೆ ಸರಿಯಲ್ಲ. ನನ್ನ ತಂದೆಗೆ ಕರೆತಿಮಯ್ಯ ಮತ್ತು ಚಿಕ್ಕತಿಮ್ಮಯ್ಯ ಎಂಬ ಸಹೋದರರು ಇದ್ದರು. ಈ ದಾವೆ ಯಲ್ಲಿ ಚಿಕ್ಕತಿಮಯ್ಯ ನನ್ನ ತಂದೆಯ ತಮ್ಮ ಅಲ್ಲ ಎಂದು ವಾದಪತ್ರ ದಲ್ಲಿ ನಮೂದಿಸಿರುವುದಿಲ್ಲ. ವಾದ ಪತ್ರದಲ್ಲಿ ನನ್ನ ತಂದೆ ಚಿಕ್ಕತಿಮ್ಮಯ್ಯ ಮತ್ತು ಕರೆತಿಮ್ಮಯ್ಯ ನವರು ಒಟ್ಟಾಗಿ ಇರಲಿಲ್ಲ ಎಂದು ನಾನು ನಮೂದಿಸಿಲ್ಲ. ನನಗೆ ಇಬ್ಬರೂ ಸಹೋದರರು ಇದ್ದಾರೆ ವೆಂಕಟಸ್ವಾಮಿ ಮತ್ತು ಗಂಗಾಧಾರಪ್ಪ. ನನ್ನ ಮತ್ತು ನನ್ನ ಸಹೋದರರ ನಡುವೆ ವಿಭಾಗ ಆಗಿರುವುದಿಲ್ಲ. ನನ್ನ ಸಹೋದರರು ದಾವಾ ಆಸ್ತಿಯನ್ನು ಆಸ್ತಿಯನ್ನು ಭಾಗ ನನಗೆ ಬಿಟ್ಟಿರುತ್ತಾರೆ. ನನ್ನ ಸಹೋದರರು ಮೌಖಿಕ ವಿಭಾಗದಲ್ಲಿ ದಾವಾ ಆಸ್ತಿಯನ್ನು ನನಗೆ ಬಿಟ್ಟಿರುತ್ತಾರೆ ಈ ಬಗ್ಗೆ ಯಾವುದೇ ದಾಖಲೆ ಜಾರಿಗೆ ತಂದಿರುವುದಿಲ್ಲ ಮತ್ತು ವೆಂಕಟ ಸ್ವಾಮಿಗೆ ಸರ್ವೇನಂ 205

ರ ಆಸ್ತಿಯನ್ನು ಕೊಡಲಾಗಿರುತ್ತದೆ ಮತ್ತು ಗಂಗಾಧಾರಪ್ಪ ನವರಿಗೆ ಸರ್ವೇ ನಂ 181 ಆಸ್ತಿಯನ್ನು ಕೊಡಲಾಗಿರುತ್ತದೆ . ವಿಭಾಗದಂತೆ ರೆವಿನ್ಯೂ- ದಾಖಲೆಗಳು ನನ್ನ ಮತ್ತು ನನ್ನ ಸಹೋದರರರಿಗೆ ಯಾವುದೇ ಬದಲಾವಣೆ ಆಗಿರುವುದಿಲ್ಲ . ಸಾಕ್ಷಿಯು ಮುಂದುವರೆದು ವಿಭಾಗದಂತ ಸ್ವಾಧೀನದಲ್ಲಿ ಇದ್ದೇವೆ ಎಂದು ಉತ್ತರಿಸುತ್ತೆವೆ . OS no.183/2019 ರ ದಾವೆಯಲ್ಲಿ ನನ್ನ ಅಣ್ಣನ ಮಗ ನರೇಂದ್ರ ಕುಮಾರ ರವರು ದಾವಾ ಆಸ್ತಿಗೆ ಸಂಬಂಧಪಟ್ಟಂತೆ ದಾವೆ ಡಿಕ್ರಿ ಅಗಿದೆ ಎಂದರೆ ಸರಿ . ಡಿಕ್ರಿ ಯಂತೆ ನ್ಯಾಯಾಲಯ ದಿಂದ ಅಯುಕ್ತರು ಬಂದು ವಿಭಾಗಮಾಡಿರುತ್ತಾರೆ ಎಂದರೆ ಸರಿಯಲ್ಲ . ಸದರಿ ದಾವೆಯಲ್ಲಿ ನನ್ನ ಅಣ್ಣನ ಮಗ ದಾವಾ ಆಸ್ತಿಯಲ್ಲಿ ನಮ್ಮ ಕುಟುಂಬಕ್ಕೆ 1/3 ಭಾಗದ ಹಕ್ಕು ಇದೆ ಎಂದು ದಾವೆ ಹೂಡಿರುತ್ತಾರೆ ಎಂದರೆ ಸರಿಯಲ್ಲ . ರೆವಿನ್ಯೂ ನ್ಯಾಯಾಲಯದಲ್ಲಿ ನಾನು ಸಲ್ಲಿಸಿರುವ 2006-2007 ರ ಅಫೀಲುಗಳು ಚಾಲ್ತಿಯಲ್ಲಿರುತ್ತದೆ . ರೆವಿನ್ಯೂ ನ್ಯಾಯಾಲಯದಲಿರುವ ಅಫೀಲುಗಳು ವಜಾ ಆಗಿದ್ದು , ವಜಾ ಅದ ನಂತರ ದಾವ ಸರ್ವೇನಂ ಪೋಡಿಯಾಗಿ ವಿಭಾಗ ಆಗಿರುತ್ತದೆ ಎಂದರೆ ಸರಿಯಲ್ಲ .ಮೊದಲನೇ ಪ್ರತಿವಾದಿ ಯು ದಾವಾ ಸರ್ವೇ ನಂ 2 ಎಕರೆ 2 ಗುಂಟೆ ಖರೀದಿಮಾಡಿ ಕಳೆದ 35 ವರ್ಷಗಳಿಂದ ಸ್ವಾದೀನದಲಿರುತ್ತಾರೆ ಎಂದರೆ ಸರಿಯಲ್ಲ . ಸಾಕ್ಷಿಯು ಮುಂದುವರೆದು ನಮಗೆ ಗೂತ್ತಿಲ್ಲದಂತೆ ದಾಖಲೆ ಮಾಡಿಕೊಂಡಿರುತ್ತಾರೆ ಎಂದು ಉತ್ತರಿಸಿರುತ್ತಾರೆ . ನಾನು ಸಕ್ರಮನವರಿಂದ ದಾವಾ ಆಸ್ತಿಯನ್ನು ಪಡೆದು ಯುವುದಕ್ಕೆ ಎರಡನೇ ಪ್ರತಿವಾದಿ ಕಡೆಯಿಂದ ಒಂದನೇ ಪ್ರತಿವಾದಿಯ ಮೇಲೆ ದಾವೆ ಹೂಡಿರುತ್ತೆನೆ ಎಂದೆರ ಸರಿಯಲ್ಲ , ಎರಡನೇ ಪ್ರತಿವಾದಿಯಿಂದ ಸಲ್ಲಿಸಿರುವ ಎಲ್ಲಾ ದಾವೆ ಗಳು ಮತ್ತು ಪ್ರಕರಣಗಳು ವಜಾ ಅದ ಕಾರಣ ನಾನೆ ಈ ಸುಳ್ಳು ದಾವೆ ಯನ್ನು ಹೂಡಿ ಅಸ್ತಿಯನ್ನು ಕಬಳಿಸಲು ಸುಳ್ಳು ಸಾಕ್ಷಿ ಯನ್ನು ಹೇಳುತ್ತೇನೆ ಎಂದೆರ ಸರಿಯಲ್ಲ . ನಮ್ಮ ತಂದೆಯ ಕಾಲದಿಂದಲೂ ನಾನು ದಾವಾ ಸರ್ವೇ ನಂ ನಲ್ಲಿ ಕೇವಲ 1 ಎಕರೆ 24 ಗುಂಟೆ ಸ್ವಾದೀನದಲ್ಲಿ ಇದ್ದೇವೆ ಎಂದರೆ ಸರಿಯಲ್ಲ .

**ಪಾಟೀ ಸವಾಲು : ಈ ಹಂತದಲ್ಲಿ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಪಾಟೀ ಸವಾಲಿಗೆ ಮುಂದೂಡಲಾಯಿತು.**

- -

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಕ್ತ ಲೇಖನ ಕೊಟ್ಟು ಓದಿ ನೋಡಿ ಸರಿಪಡಿಸಿ ನಂತರ ಸಹಿ ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

**(ಎ.ಎನ್.ಕಾಂತಮ್ಮ)**
ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ
ಮಧುಗಿರಿ.